**ಒ.ಎಸ್.ನಂಬ್ರ:295/2019 ಪಿ.ಡಬ್ಲ್ಯೂ : 2**

ದಿನಾಂಕ: 15-06-2024 ರಂದು ಸಾಕ್ಷಿಯನ್ನು ಪುನ: ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

**ಪಾಟಿ ಸವಾಲು: ಪ್ರತಿವಾದಿ ಪರ ವಕೀಲರಾದ ಶ್ರೀ ಬಿ.ಎಸ್.ಎಚ್. ರವರಿಂದ**

ಪ್ರತಿವಾದಿಗಳ ಪರಿಚಯವಿರುವುದಿಲ್ಲ. ಪ್ರತಿವಾದಿಗಳ ತಾಯಿ ಸುಬ್ಬಿ ಹೆಂಗ್ಸು ರವರ ಪರಿಚಯ ಇಲ್ಲ. ಪ್ರತಿವಾದಿಗಳ ಸಹೋದರ ರಾಮ ಪೂಜಾರಿ ರವರ ಪರಿಚಯ ಇಲ್ಲ. ನಾನು ಪುಟ್ಟಿ ಎಂದು ಸಹಿ ಮಾಡುತ್ತೇನೆ. ನಾನು ಪ್ರತಿವಾದಿಗಳ ತಾಯಿ ಸುಬ್ಬಿ ಹೆಂಗ್ಸು ಮತ್ತು ಅವರ ಮಗ ರಾಮ ಪೂಜಾರಿ ರವರಿಗೆ ಕರಾರು ಮಾಡಿಕೊಟ್ಟಿರುವುದಿಲ್ಲ. ಸಾಕ್ಷಿಗೆ ದಿ:21-01-1992 ಮತ್ತು 21-05-1992 ರ ಕರಾರು ಪತ್ರಗಳನ್ನು ತೋರಿಸಲಾಗಿ ಅದರಲ್ಲಿರುವ ಸಹಿಗಳನ್ನು ನೋಡಿ ನನ್ನ ಸಹಿ ಅಲ್ಲ ಎಂದು ನುಡಿದಿರುತ್ತಾರೆ. ನಾನು ಕೋಟದ ಮೂಡುಗಿಳಿಯಾರುವಿನಲ್ಲಿ ವಾಸ ಮಾಡಿಕೊಂಡಿದ್ದು ಹೆಮ್ಮಾಡಿಯಲ್ಲಿ ವಾಸವಾಗಿರಲಿಲ್ಲ ಎಂದರೆ ಸರಿಯಲ್ಲ. ಹೆಮ್ಮಾಡಿಯಲ್ಲಿ ನಮಗೆ ಸಂಬಂಧಿಸಿದ ಯಾವುದೇ ಮನೆ ಅಥವಾ ಜಾಗ ಇಲ್ಲ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಕರಾರು ಮಾಡಿಕೊಂಡು ಸಂಪೂರ್ಣ ಹಣ ಪಡೆದು ದಾವಾ ಸ್ವತ್ತನ್ನು ಬಿಟ್ಟುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

1992 ರಿಂದ ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳು ಸ್ವಾಧೀನದಲ್ಲಿದ್ದು , ಈಗಲೂ ಪ್ರತಿವಾದಿಗಳೇ ವ್ಯವಸಾಯ ಮಾಡಿಕೊಂಡು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ನಾನು ಕರಾರು ಮಾಡಿಕೊಂಡು ಹಣ ಸ್ವೀಕರಿಸಿ ಅದಕ್ಕೆ ಸಹಿ ಮಾಡಿ ಈಗ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಕರಾರನ್ನು ತೋರಿಸಿ ಅದರಲ್ಲಿ ಇರುವ ಸಹಿ ನಿಮ್ಮದೇ ಆಗಿರುತ್ತದೆ ಎಂದು ಹೇಳಲಾಗಿ ಸರಿಯಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿದಾರರ ಸಮಕ್ಷಮ ನಾನು ಕರಾರಿಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರಗಳೆಲ್ಲಾ ಸುಳ್ಳು ಎಂದರೆ ಸರಿಯಲ್ಲ. ಕರಾರಿನಲ್ಲಿರುವ ಸಹಿ ನನ್ನದಲ್ಲ ಎಂದು ಸಾಬೀತುಪಡಿಸಲು ಸದರಿ ಕರಾರನ್ನು ತನಿಖೆಗೆ ಒಳಪಡಿಸಲು ನನ್ನ ಆಕ್ಷೇಪಣೆ ಇಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ 2019 ರಲ್ಲಿ ಪ್ರತಿವಾದಿಗಳು ಅತಿಕ್ರಮ ಪ್ರವೇಶ ಮಾಡಿ ಮಣ್ಣು ಹಾಕಿ ಬಲಾತ್ಕಾರವಾಗಿ ಸ್ವಾಧೀನ ಪಡೆಯಲು ಪ್ರಯತ್ನಿಸಿರುತ್ತಾರೆಂದು ಸುಳ್ಳು ಹೇಳಿರುತ್ತೇನೆಂದರೆ ಸರಿಯಲ್ಲ.

ನಾನು ಕರಾರನ್ನು ಮಾಡಿಕೊಟ್ಟಿದ್ದರೂ , ಮಕ್ಕಳ ಒತ್ತಾಯದಿಂದ ಕರಾರು ಮಾಡಿಕೊಟ್ಟಿಲ್ಲ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಕ್ಕಳು ಹೇಳಿಕೊಟ್ಟ ಮೇರೆಗೆ ಈ ದಿನ ನ್ಯಾಯಾಲಯದಲ್ಲಿ ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಧನೆ ಮಾಡುತಿದ್ದೇನೆ ಎಂದರೆ ಸರಿಯಲ್ಲ. 1992 ರ ನಂತರದಿಂದ ನಾವು ದಾವಾ ಸ್ವತ್ತಿಗೆ ಹೋಗಿಲ್ಲ, ದಾವಾ ಸ್ವತ್ತಿನಲ್ಲಿ ಸಾವಧೀನದಲ್ಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ**

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ .**